# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 542

ಉತ್ತರಿಸಬೇಕಾದ ದಿನಾಂಕ : 11-07-2023

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಹಕಾರ ಸಂಸ್ಥೆಗಳಿಂದ ರೈತರಿಗೆ ದೊರೆಯುತ್ತಿರುವ ಸಾಲ ಸಹಾಯಧನ ಮತ್ತು ಇತರೇ ಸೌಲಭ್ಯಗಳು ಯಾವುವು; | ರಾಜ್ಯದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೈತರಿಗೆ ಈ ಕೆಳಕಂಡ ಸಾಲ ಮತ್ತು ಇತರೇ ಸೌಲಭ್ಯಗಳು ದೊರೆಯುತ್ತಿರುತ್ತವೆ.<br>1. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೈತರು ಬೆಳೆಯುವ ಬೆಳೆ ಮತ್ತು ಸ್ಕೇಲ್ ಆಫ್ ಫೈನಾನ್ಸ್ ಆಧಾರವಾಗಿ ಪಶುಸಂಗೋಪನೆ ಒಳಗೊಂಡಂತೆ ಕೃಷಿ ಚಟುವಟಿಕೆಗಳಿಗೆ ಗರಿಷ್ಠ ರೂ.3.00ಲಕ್ಷಗಳವರೆಗೆ ವಿತರಿಸುವ ಬೆಳೆ ಸಾಲವನ್ನು ನೀಡುತ್ತಿದ್ದು, ರೈತರು ನಿಗದಿತ ಗಡುವಿನ ಒಳಗಾಗಿ (ಗರಿಷ್ಠ ಒಂದು ವರ್ಷ) ಮರುಪಾವತಿಸಿದಲ್ಲಿ ಶೂನ್ಯ ಬಡ್ಡಿ ದರ ಅನ್ವಯವಾಗುತ್ತದೆ. ಸರ್ಕಾರವು ರೈತರ ಪರವಾಗಿ ಸಹಕಾರ ಸಂಘಗಳಿಗೆ ನಿಗದಿತ ಪ್ರಮಾಣದ ಬಡ್ಡಿ ಸಹಾಯಧನವನ್ನು ನೀಡುತ್ತದೆ.<br>2. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (ಪ್ಯಾಕ್ಸ್‌ಗಳು), ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ದಿ ಬ್ಯಾಂಕುಗಳು (ಪಿಕಾರ್ಡ್ ಬ್ಯಾಂಕ್‌ಗಳು) ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು (ಡಿಸಿಸಿ ಬ್ಯಾಂಕುಗಳು) ರೈತರು ಭೂಮಿಯನ್ನು ಅಭಿವೃದ್ಧಿ ಪಡಿಸಲು ಹಾಗೂ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು ನಬಾರ್ಡ್ ವರ್ಗೀಕರಿಸಿದ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲವನ್ನು ಗರಿಷ್ಠ 10.00ಲಕ್ಷಗಳವರೆಗೆ ವಿತರಿಸಿ ರೈತರು ನಿಗದಿತ ಗಡುವಿನ ಒಳಗಾಗಿ ಕಂತುಗಳನ್ನು ಮರುಪಾವತಿಸಿದ್ದಲ್ಲಿ ಶೇ.3ರ ಬಡ್ಡಿದರ ಅನ್ವಯವಾಗುತ್ತದೆ. ಸರ್ಕಾರವು ರೈತರ ಪರವಾಗಿ ಸಹಕಾರ ಸಂಘಗಳಿಗೆ ನಿಗದಿತ ಪ್ರಮಾಣದ ಬಡ್ಡಿ ಸಹಾಯಧನವನ್ನು ನೀಡುತ್ತದೆ. |

| | | |
|---|---|---|
| | | 3. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಪ್ರಾಥಮಿಕ ಕೃಷಿ ಮಾರುಕಟ್ಟೆ ಸಹಕಾರ ಸಂಘಗಳಲ್ಲಿ ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ಗೋದಾಮುಗಳಲ್ಲಿ ಶೇಖರಣೆ ಮಾಡಿ ವಿತರಿಸುವ ರೂ.2.00ಲಕ್ಷಗಳವರೆಗಿನ ಅಡಮಾನ ಸಾಲಕ್ಕೆ ಆರು ತಿಂಗಳವರೆಗೆ ಶೇ.7ರ ಬಡ್ಡಿ ದರ ಅನ್ವಯವಾಗುತ್ತದೆ. ಬಾಕಿ ಶೇ.4 ರ ಬಡ್ಡಿ ಸಹಾಯಧನವನ್ನು ಸರ್ಕಾರ ಭರಿಸುತ್ತದೆ.<br>4. 2023–24ನೇ ಸಾಲಿನ ಆಯವ್ಯಯದಲ್ಲಿ ಅಲ್ಪಾವಧಿ ಕೃಷಿ ಸಾಲದ ಮೊತ್ತದ ಮಿತಿಯನ್ನು ರೂ.3.00 ಲಕ್ಷಗಳಿಂದ ರೂ.5.00 ಲಕ್ಷಕ್ಕೆ ಹೆಚ್ಚಿಸಲು ಹಾಗೂ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲದ ಮೊತ್ತದ ಮಿತಿಯನ್ನು ರೂ.10.00 ಲಕ್ಷಗಳಿಂದ ರೂ.15.00ಲಕ್ಷಗಳಿಗೆ ಹೆಚ್ಚಿಸಲು ಘೋಷಿಸಲಾಗಿದೆ.<br><br>ಪ್ಯಾಕ್ಸ್‌ಗಳು ರೈತರ ಕೃಷಿ ಚಟುವಟಿಕೆಗಳಿಗೆ ಪೂರಕವಾಗಿ ಕೃಷಿ ಪರಿಕರಗಳನ್ನು ಮಾರಾಟ ಮಾಡುತ್ತಿದ್ದು, ಬೆಳೆ ವಿಮೆ ಪ್ರೀಮಿಯಂ ಸಂಗ್ರಹಣೆ ಜೊತೆಗೆ ಇತ್ತೀಚೆಗೆ ಬಹುಪಯೋಗಿ ಸೇವಾ ಕೇಂದ್ರ (Multi Service Center) ಗಳಾಗಿ ಕೆಲಸ ಪ್ರಾರಂಭಿಸಿದ್ದು, ಇದರಲ್ಲಿ ವಿವಿಧ ವಿಮೆ, ಆಧಾರ್ ಸೇವೆಗಳು, ಪಾನ್ ಕಾರ್ಡ್, ರೈಲ್ವೆ/ಬಸ್/ವಿಮಾನ ಟಿಕೆಟ್ ಸೇವೆಗಳು ಮುಂತಾದ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸೇವೆಗಳನ್ನು ರೈತರಿಗೆ ತಲುಪಿಸುತ್ತಿರುತ್ತವೆ. |
| ಆ) | ಪ್ರಸ್ತುತ ಆರ್ಥಿಕ ವರ್ಷದಲ್ಲಿ ರೈತ ಫಲಾನುಭವಿಗಳಿಗೆ ಸಾಲ ಪಡೆಯಲು ನಿಗದಿಪಡಿಸಿರುವ ಮಾನದಂಡ ನಿಯಮ ಹಾಗೂ ಷರತ್ತುಗಳೇನು; (ಆದೇಶಗಳ ಪ್ರತಿ ಒದಗಿಸುವುದು) | ಪ್ರಸ್ತುತ ಆರ್ಥಿಕ ವರ್ಷದಲ್ಲಿ ಸಹಕಾರ ಸಂಘಗಳು ರೈತರಿಗೆ ವಿತರಿಸುವ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲಗಳಿಗೆ ಬಡ್ಡಿ ದರ ಮತ್ತು ಮಾನದಂಡಗಳನ್ನು ಇದುವರೆಗೆ ನಿಗದಿಪಡಿಸಿರುವುದಿಲ್ಲ.<br>ಆಯವ್ಯಯದಲ್ಲಿ ಒದಗಿಸುವ ಅನುದಾನದ ಆಧಾರದ ಮೇಲೆ ಮಾನದಂಡಗಳನ್ನು ಮತ್ತು ಷರತ್ತುಗಳನ್ನು ನಿಗದಿಪಡಿಸಿ ಆದೇಶ ಹೊರಡಿಸಲು ಕ್ರಮವಹಿಸಲಾಗುವುದು.<br>ಸಹಕಾರ ಸಂಘಗಳು ನಿಗದಿತ ಅವಧಿಯಲ್ಲಿ ಸಾಲ ಮರುಪಾವತಿಸಿದ ರೈತರಿಗೆ ಮತ್ತು ಹೊಸದಾಗಿ ಅರ್ಜಿ ಸಲ್ಲಿಸುವ ರೈತರಿಗೆ ಡಿಸಿಸಿ ಬ್ಯಾಂಕ್ ಮತ್ತು ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ಕಸ್ಕಾರ್ಡ್ ಬ್ಯಾಂಕಿನ) ನಿಯಮಾವಳಿಗಳನ್ವಯ ಕೃಷಿ ಸಾಲಗಳನ್ನು ವಿತರಿಸಲಾಗುತ್ತಿದೆ. |

| | | |
|---|---|---|
| ಇ) | ರಾಜ್ಯದಲ್ಲಿ ಪ್ರತಿ ಫಲಾನುಭವಿ ರೈತರಿಗೆ ಗರಿಷ್ಠ ಎಷ್ಟು ಮೊತ್ತದ ಬಡ್ಡಿ ರಹಿತ ಸಾಲವನ್ನು ವಿತರಿಸಲಾಗುತ್ತಿದೆ; ಹಾಗೂ ಬಡ್ಡಿ ರಹಿತ ಸಾಲವನ್ನು ಪಡೆಯಲು ನಿಗಧಿಪಡಿಸಿರುವ ಮಾನದಂಡಗಳೇನು; ಹಾಗೂ ಬಡ್ಡಿ ರಹಿತ ಸಾಲವನ್ನು ವಿತರಿಸುವ ಸಲುವಾಗಿ ಒದಗಿಸಿರುವ ಅನುದಾನದ ವಿವರಗಳೇನು; | 2022-23 ನೇ ಸಾಲಿನಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಪ್ರತಿ ಫಲಾನುಭವಿ ರೈತರಿಗೆ ಗರಿಷ್ಠ ರೂ.3.00ಲಕ್ಷದ ವರೆಗಿನ ಅಲ್ಪಾವಧಿ ಕೃಷಿ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ವಿತರಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಆಯವ್ಯಯ ಭಾಷಣದ ನಂತರ ಗರಿಷ್ಠ ಮಿತಿಯನ್ನು ನಿಗದಿಪಡಿಸಲಾಗುವುದು. 2022-23ನೇ ಸಾಲಿನಲ್ಲಿ ಸಹಕಾರ ಸಂಘಗಳು ತಮ್ಮ ಸ್ವಂತ ಬಂಡವಾಳ ಮತ್ತು ನಬಾರ್ಡ್ ಪುನರ್ಧನದಿಂದ 32.36 ಲಕ್ಷ ರೈತರಿಗೆ ರೂ.22,337 ಕೋಟಿ ಸಾಲ ವಿತರಿಸಲು ಗುರಿ ನಿಗದಿಪಡಿಸಲಾಗಿತ್ತು.<br>ಪ್ರಸಕ್ತ ಸಾಲಿಗೆ ಸಹಕಾರ ಸಂಘಗಳು ವಿತರಿಸುವ ಕೃಷಿ ಸಾಲದ ಗುರಿಯನ್ನು ಆಯವ್ಯಯ ಭಾಷಣದ ನಂತರ ನಿಗದಿಪಡಿಸಲಾಗುತ್ತದೆ ಮತ್ತು ಹಿಂದಿನ ಆಯವ್ಯಯದಲ್ಲಿ ರೈತರ ಪರವಾಗಿ ಸಹಕಾರ ಸಂಘಗಳಿಗೆ ನೀಡಬೇಕಾದ ಬಡ್ಡಿ ಸಹಾಯಧನಕ್ಕಾಗಿ ರೂ.1155.52 ಕೋಟಿಗಳನ್ನು ನಿಗದಿಪಡಿಸಿದ್ದು, ಹೊಸ ಆಯವ್ಯಯ ಭಾಷಣ ಮಂಡನೆಯಾದ ನಂತರ ಬಡ್ಡಿ ಸಹಾಯಧನಕ್ಕಾಗಿ ಹೊಸ ಆಯವ್ಯಯ ಅವಕಾಶ ಲಭ್ಯವಾಗುತ್ತದೆ. |

**ಸಂಖ್ಯೆ: ಸಿಒ 140 ಸಿಎಲ್‌ಎಸ್ 2023**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**